# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1495
2. ಸದಸ್ಯರ ಹೆಸರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ
3. ಉತ್ತರಿಸಬೇಕಾದ ದಿನಾಂಕ : 10-03-2022

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | ಕೊಡಗು ಜಿಲ್ಲೆಯ ಹಲವಾರು ನದಿಗಳಲ್ಲಿ ಹಿಂದಿನ ವರ್ಷಗಳಲ್ಲಿ ಸಂಭವಿಸಿದ ಪ್ರವಾಹ ಹಾಗೂ ಭೂಕುಸಿತ ಹಿನ್ನೆಲೆಯಲ್ಲಿ ಸಾಕಷ್ಟು ಹೂಳು ತುಂಬಿದ್ದು, ಅದನ್ನು ತೆಗೆಯಲು ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು; | ಕೊಡಗು ಜಿಲ್ಲೆಯ ಕಾವೇರಿ ಮತ್ತು ಹಾರಂಗಿ ನದಿ ಪಾತ್ರದಲ್ಲಿ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>1. ಕಾವೇರಿ ನದಿ ಪಾತ್ರದಲ್ಲಿ ಕುಶಾಲನಗರದ ಕೊಪ್ಪ ಸೇತುವೆ ಬಳಿ ನೀರಿನ ಹರಿವಿಗೆ ಅಡಚಣೆಯಾಗಿದ್ದ 4300 ಮೀ ಉದ್ದಕ್ಕೆ ಹಾಗೂ ತಪೋವನದ ಬಳಿ 2000 ಮೀ ಉದ್ದಕ್ಕೆ ಜೊಂಡು ಹಾಗೂ ಮಣ್ಣು ಮಿಶ್ರಿತ ಹೂಳು ತೆಗೆಯುವ ಕಾಮಗಾರಿಯನ್ನು National Disaster Response Fund (NDRF) ಲೆಕ್ಕಶೀರ್ಷಿಕೆಯಡಿ ರೂ.88.00 ಲಕ್ಷಗಳಲ್ಲಿ 2020-21 ನೇ ಸಾಲಿನಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.<br>2. ಕಾವೇರಿ ನೀರಾವರಿ ನಿಗಮದ ವತಿಯಿಂದ, ಕಾವೇರಿ ನದಿಯ ಉಗಮಸ್ಥಾನ ಭಾಗಮಂಡಲದಿಂದ ನದಿಯ ನೀರಿನ ಹರಿವಿಗೆ ಅಡಚಣೆಯಾಗಿರುವ ಗಿಡಗಂಟೆಗಳು ಮತ್ತು ಜೊಂಡನ್ನು ತೆಗೆಯಲು ಕಾವೇರಿ ನದಿಯ 11.50 ಕಿ.ಮೀ & ಉಪನದಿ ಕನ್ನಿಕೆಯ 6.20 ಕಿ.ಮೀ ಮತ್ತು ಇತರ ಉಪನದಿಗಳು 12.00 ಕಿ.ಮೀ ಉದ್ದಕ್ಕೆ ಸರಾಸರಿ 10.00 ರಿಂದ 50.00 ಮೀ ಅಗಲದವರೆಗೆ ತೆರವುಗೊಳಿಸುವ ಕಾಮಗಾರಿಯನ್ನು ರೂ.79.18 ಲಕ್ಷಗಳಲ್ಲಿ 2020-21 ನೇ ಸಾಲಿನಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.<br>3. ಕಾವೇರಿ ನೀರಾವರಿ ನಿಗಮದ ವತಿಯಿಂದ ಹಾರಂಗಿ ಜಲಾನಯನ ಪ್ರದೇಶ ಮತ್ತು ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾ ಕಾಮಗಾರಿಯ ರೂ. 130.00 ಕೋಟಿಗಳ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಪ್ರಸ್ತುತ ಟೆಂಡರ್ ಪ್ರಕ್ರಿಯೆಯಲ್ಲಿದೆ.<br>4. ಪ್ರಸಕ್ತ ಆರ್ಥಿಕ ವರ್ಷದಲ್ಲಿ National Disaster Response Fund (NDRF) ಲೆಕ್ಕಶೀರ್ಷಿಕೆಯಡಿ ರೂ.50.00 ಲಕ್ಷ ಮೊತ್ತದ 3 ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಪ್ರಸ್ತುತ ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಆ | ಕ್ರಮ ಕೈಗೊಂಡಿದ್ದಲ್ಲಿ, ಸದರಿ ಹೂಳು ತೆಗೆಯುವ ಕಾಮಗಾರಿಗಳಿಗೆ ಕಳೆದ 3 ವರ್ಷಗಳಲ್ಲಿ ಎಷ್ಟು ಅನುದಾನ ವಿನಿಯೋಗಿಸಲಾಗಿದೆ; | ವಿವರಗಳನ್ನು ಅನುಬಂಧ-I ರಲ್ಲಿ ಲಗತ್ತಿಸಿದೆ. |
| ಇ | ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸದರಿ ಹೂಳು ತೆಗೆಯುವ ಕಾಮಗಾರಿಗಳಿಗೆ ಮಂಜೂರಾದ ಹಾಗೂ ಬಿಡುಗಡೆಯಾಗಿರುವ ಹಾಗೂ ವಿನಿಯೋಗಿಸಿರುವ ಅನುದಾನ ಎಷ್ಟು? (ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು) | |

*ಸಂಖ್ಯೆ:ಜಸಂಇ 47 ಎನ್ಎಲ್ಎ 2022*

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ
ಪ್ರಶ್ನೆ ಸಂಖ್ಯೆ 1289(1495) ಕ್ಕೆ ಅನುಬಂಧ-1

ವಿಷಯ: ಕೊಡಗು ಜಿಲ್ಲೆಯಲ್ಲಿ ಹೂಳು ತೆಗೆಯುವ ಕಾಮಗಾರಿಗಳಿಗೆ ಮಂಜೂರಾದ ಹಾಗೂ ಬಿಡುಗಡೆಯಾಗಿರುವ ಅನುದಾನದ ವಿವರ: (ರೂ ಕೋಟಿಗಳಲ್ಲಿ)

| ಕ್ರ.ಸಂ | ಕಾಮಗಾರಿಯ ಹೆಸರು | ವರ್ಷ | ಅಂದಾಜು ಮೊತ್ತ | ಗುತ್ತಿಗೆ ಮೊತ್ತ | ಅನುದಾನ (2020-21) | ಅನುದಾನ (2021-22) | ವೆಚ್ಚ (28.02.2022) | ಷರಾ |
|---|---|---|---|---|---|---|---|---|
| | ನಿಗಮದ ವತಿಯಿಂದ ಕೈಗೊಂಡಿರುವ ಕಾಮಗಾರಿಗಳು | | | | | | | |
| | | 2019-20 | ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ | | | | | |
| 1 | ಕಾವೇರಿ ನದಿಯ ಪುನಶ್ಚೇತನದ ಭಾಗವಾಗಿ ಕಾವೇರಿ ಮತ್ತು ಕನ್ನಿಕೆ ಉಪನದಿಗಳಲ್ಲಿ ಇವುಗಳ ಉಗಮಸ್ಥಾನದಿಂದ ಭಾಗಮಂಡಲದ ಸಂಗಮದವರೆಗೆ ಮತ್ತು ಸಂಗಮದ ನಂತರದ 2 ಕಿ.ಮೀವರೆಗೆ ಗಿಡಗಂಟೆಗಳನ್ನು ತೆರವುಗೊಳಸುವುದು. | 2020-21 | 1.06 | 0.79 | 0.34 | 0.45 | 0.79 | ಭೌತಿಕವಾಗಿ ಪೂರ್ಣಗೊಂಡಿದೆ. |
| 2 | ಹಾರಂಗಿ ಜಲಾನಯನ ಪ್ರದೇಶ ಮತ್ತು ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾ ಕಾಮಗಾರಿ | 2020-21 | 130.00 | 0.00 | 13.46 | 6.31 | 0.00 | ಟೆಂಡರ್ ಪ್ರಕ್ರಿಯೆಯಲ್ಲಿದೆ |
| | National Disaster Response fund(NDRF) ವತಿಯಿಂದ ಕೈಗೊಂಡಿರುವ ಕಾಮಗಾರಿಗಳು | | | | | | | |
| 1 | ಕೊಡಗು ಜಿಲ್ಲೆಯ ಕಾವೇರಿ ನದಿ ಬಳಿಯ ಕೊಪ್ಪ ಸೇತುವೆ ಹಾಗೂ ತಪೋವನದಲ್ಲಿ ಗಿಡಗಂಟೆಗಳನ್ನು ತೆರವುಗೊಳಸುವುದು. | 2020-21 | 0.88 | 0.87 | 0.00 | 0.87 | 0.55 | ಭೌತಿಕವಾಗಿ ಪೂರ್ಣಗೊಂಡಿದೆ. ಬಿಲ್ಲು ಪಾವತಿಯಾಗಬೇಕಿದೆ. |
| 2 | ಕಾವೇರಿ ನದಿಯ ಪುನರುಜ್ಜೀವನದ ಭಾಗವಾಗಿ ನಿಸರ್ಗಧಾಮದಿಂದ ಮಾದಾಪಟ್ಟಣದವರೆಗೆ ಕಾವೇರಿ ನದಿಯ ಉದ್ದಕ್ಕೂ ಗಿಡಗಂಟೆಗಳನ್ನು ತೆರವುಗೊಳಸುವುದು. | 2021-22 | 0.20 | 0.10 | 0.00 | 0.20 | 0.00 | ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ನದಿಯಲ್ಲಿ ನೀರು ಕಡಿಮೆಯಾದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. |
| 3 | ಕಾವೇರಿ ನದಿಯ ಪುನರುಜ್ಜೀವನದ ಭಾಗವಾಗಿ ಮಾದಾಪಟ್ಟಣದಿಂದ ಗಂದಕೋಟೆದವರೆಗೆ ಕಾವೇರಿ ನದಿಯ ಉದ್ದಕ್ಕೂ ಗಿಡಗಂಟೆಗಳನ್ನು ತೆರವುಗೊಳಸುವುದು. | 2021-22 | 0.20 | 0.11 | 0.00 | 0.20 | 0.00 | ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ನದಿಯಲ್ಲಿ ನೀರು ಕಡಿಮೆಯಾದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. |
| 4 | ಕಾವೇರಿ ನದಿಯ ಪುನರುಜ್ಜೀವನದ ಭಾಗವಾಗಿ ಗಂದಕೋಟೆಯಿಂದ ಬೈಚನಹಳ್ಳವರೆಗೆ ಕಾವೇರಿ ನದಿಯ ಉದ್ದಕ್ಕೂ ಗಿಡಗಂಟೆಗಳನ್ನು ತೆರವುಗೊಳಸುವುದು. | 2021-22 | 0.10 | 0.065 | 0.00 | 0.10 | 0.00 | ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ನದಿಯಲ್ಲಿ ನೀರು ಕಡಿಮೆಯಾದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. |